ಅ) ದಾಖಲೆಯಾದ ಮೊಕದ್ದಮೆಗಳ ವಿವರ ಈ ಕೆಳಗಿನಂತಿದೆ.

೧೯೮೩-೮೪	೧೫,೦೯೨ ಮೊಕದ್ದಮೆಗಳು.
೧೯೮೪-೮೫	೧೭.೨೫೮ ಮೊಕದ್ದಮೆಗಳು.
೧೯೮೫-೮೬	೧೩,೮೭೬ ಮೊಕದ್ದಮೆಗಳು.

ಧಾರವಾಡ ಜಿಲ್ಲೆಯ ಸುಮಾರು ಅರ್ಧಭಾಗ ಮತ್ತು ಕಾರವಾರ ಜಿಲ್ಲೆಯನ್ನೊಳಗೊಂಡ ಕೆನರಾ ವೃತ್ತದ ಪ್ರದೇಶಗಳಲ್ಲಿ ಹೆಚ್ಚಿನ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಇ) ಈ ಜಾಗಗಳಿಂದ ಕದ್ದು ಸಾಗಿಸಿದ ಪ್ರಕರಣಗಳಿರುವುದಿಲ್ಲ.

ಕಲಘಟಗಿಯಲ್ಲಿ ಮಂತ್ರಿಗಳಿಗಾಗಿ ಗ್ರಾಮದಲ್ಲಿ ಪಶುವೈದ್ಯ ಶಾಲೆಯನ್ನು ಸ್ಥಾಪನೆ ಬಗ್ಗೆ

೫೩೦ (ಡಿ) ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ, ವಿಧಾನ ಸಭಾ ಸದಸ್ಯರು).—ಮಾನ್ಯ ರೇಷ್ಮೆ, ಪಶುಸಂಗೋಪನಾ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿ ಕ್ಷೇತ್ರದ ಮಂತ್ರಿಗಳಿಗಾಗಿ ಗ್ರಾಮೀಣ ಪಶುವೈದ್ಯ ಶಾಲೆಯನ್ನು ತೆರೆಯುವ ಯೋಜನೆ ಸರ್ಕಾರದವರ ಗಮನದಲ್ಲಿದೆಯೇ,

ಆ) ಸದರಿ ಆಸ್ಪತ್ರೆಯನ್ನು ತೆರೆಯುವುದರಿಂದ ಮಂತ್ರಿಗಳಿಗಾಗಿ ಗ್ರಾಮದ ಸುತ್ತಮುತ್ತಲಿರುವ ೮-೧೦ ಗ್ರಾಮಗಳ ರೈತರಿಗೆ ಪ್ರಯೋಜನವಾಗುತ್ತದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನ ಮತ್ತು ವೀಸುಗಾರಿಕೆ ಸಚಿವರು).—

ಅ) ಸಧ್ಯಕ್ಕಿಲ್ಲ,

ಆ) ಈಗಾಗಲೇ ಇಲ್ಲಿ ಕೃತಕ ಗರ್ಭಧಾರಣ ಕೇಂದ್ರವಿದ್ದು, ಇದರ ಪ್ರಯೋಜನವನ್ನು ಮುತ್ತಗಿ ಗ್ರಾಮದ ಸುತ್ತಮುತ್ತಲ ಗ್ರಾಮದ ರೈತರು ಪಡೆಯುತ್ತಿದ್ದಾರೆ.

ಕನಕಪುರ ತಾಲ್ಲೂಕಿನ, ಚೀಲಂದವಾಡಿ ಅರಣ್ಯದಲ್ಲಿ ಕಳೆದ ಆರು ತಿಂಗಳಿಂದ ಅಕ್ರಮವಾಗಿ ಅತಿಕ್ರಮಿಸಿರುವ ಬಗ್ಗೆ

೫೯೯. ಶ್ರೀ ಕೆ. ಎಲ್. ಶಿವಲಿಂಗೇಗೌಡ (ಸಾತನೂರು) —ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನಕಪುರ ತಾಲ್ಲೂಕು ಉಯ್ಯಂಬಳ್ಳಿ ಹೋಬಳಿ ಚೀಲಂದವಾಡಿ ಅರಣ್ಯ ಪ್ರದೇಶವನ್ನು ಅತಿಕ್ರಮ ಪ್ರವೇಶ ಮಾಡಿ ಸುಮಾರು ೬೦೦ ಎಕರೆ ಪ್ರದೇಶವನ್ನು ನಾಶಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿಷಯ ಕಳೆದ ಆರು ತಿಂಗಳುಗಳಲ್ಲಿ),

ಆ) ಸದರಿ ಅರಣ್ಯ ಜವಾಬ್ದಾರಿ ಹೊತ್ತಿರುವ ಸ್ಥಳೀಯ ಅರಣ್ಯ ಅಧಿಕಾರಿಯಾಗಲಿ ಈ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಜೆ ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು). —

ಅ) ಕಳೆದ ಆರು ತಿಂಗಳಿಂದೀಚೆಗೆ ಚೀಲಂದವಾಡಿ ಅರಣ್ಯ ಪ್ರದೇಶದಲ್ಲಿ ಅತಿಕ್ರಮ ಮಾಡಿ ಅರಣ್ಯ ಪ್ರದೇಶವನ್ನು ನಾಶಪಡಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ